# ಉಡುಪಿನಲ್ಲಿ ಅರಳಿದ ಹೂವು

**ಉಡುಪುಗಳ ಮೇಲೆ ಹೂವಿನ ಚಿತ್ತಾರವಿರುವ ವಿನ್ಯಾಸ ಈಗೀಗ ಫ್ಯಾಷನ್ ಪ್ರಪಂಚದಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ. ಫ್ರಾಕ್, ಕುರ್ತಾಗಳಲ್ಲಿ ನಿಜವಾದ ಹೂವುಗಳೇ ಅರಳಿದಂತೆ ಕಾಣುವ ಈ ವಿನ್ಯಾಸ ಹೊಸ ಟ್ರೆಂಡ್ ಆಗಿದೆ.**

**■ ಆಶಾ ಎಸ್. ಕುಲಕರ್ಣಿ**



ಫ್ಯಾಷನ್ ಲೋಕದಲ್ಲಿ ಈಗೀಗ ಹೂವಿನ ಚಿತ್ತಾರದ ಉಡುಪುಗಳದ್ದೇ ಸದ್ದು. ಫ್ರಾಕ್‌ಗಳಲ್ಲಿ, ಕುರ್ತಾಗಳಲ್ಲಿ ಬಣ್ಣ ಬಣ್ಣದ, ನಿಜವಾದ ಹೂವುಗಳೇ ಅರಳಿವೆಯೋ ಎಂಬಂತೆ 'ಫ್ಲೋರಲ್ ಡಿಸೈನ್' ಕಂಗೊಳಿಸುತ್ತಿರುವುದನ್ನು ನೋಡುವುದೇ ಕಣ್ಣುಗಳಿಗೆ ಹಬ್ಬ.

ಉಡುಪು, ಒಡವೆ ಹೀಗೆ ಎಲ್ಲದರಲ್ಲೂ ವಿಭಿನ್ನವಾಗಿರಬೇಕು ಎಂದು ಬಯಸುವ ಮಹಿಳೆಯರು ಇತ್ತೀಚೆಗೆ ಪ್ರಕೃತಿಯ ಜೊತೆಗೆ ಬಾಂಧವ್ಯ ಬೆಳೆಸಿಕೊಂಡಿದ್ದಾರೆ. ತಮ್ಮ ಉಡುಪುಗಳಲ್ಲಿ ವಿಭಿನ್ನತೆಯನ್ನು ಬಯಸುವ ಮಹಿಳೆಯರ ಅಭಿರುಚಿಗೆ ತಕ್ಕಂತೆ ಫ್ಯಾಷನಿಸ್ಟ್‌ಗಳು ಪ್ರಕೃತಿಯನ್ನು ಬಿಂಬಿಸುವ ಮರಗಿಡಗಳು, ಎಲೆಗಳು, ಹೂವು, ಪಕ್ಷಿ, ಪ್ರಾಣಿ, ಚಿಟ್ಟೆ ಅಲ್ಲದೆ ನ್ಯಾಚುರಲ್ ಬಣ್ಣಗಳಲ್ಲಿ ಬಟ್ಟೆಗಳ ಮೇಲೆ ಚಿತ್ತಾರ ಮೂಡಿಸಿದ ವಿನ್ಯಾಸಗಳಿರುವ ಉಡುಪುಗಳನ್ನು ಮಾರುಕಟ್ಟೆಗೆ ಬಿಟ್ಟಿದ್ದಾರೆ. ಈ ತರಹದ ಉಡುಪುಗಳು ಇದೀಗ ಎಲ್ಲರ ಹಾಟ್ ಫೇವರೆಟ್ ಆಗಿವೆ. ಅದರಲ್ಲೂ ಪಾಶ್ಚಾತ್ಯ ಹಾಗೂ ಭಾರತೀಯ ಈ ಎರಡೂ ಶೈಲಿಯ ಉಡುಪುಗಳಲ್ಲಿ ಇದೀಗ ಎಲ್ಲರೂ ಹೂವಿನ ಚಿತ್ತಾರ ಎದ್ದು ಕಾಣುವಂತೆ ಇರುವ ಉಡುಪುಗಳನ್ನು ಧರಿಸುತ್ತಿದ್ದಾರೆ.

ಮಹಿಳೆಯರ ಅಲಂಕಾರದಲ್ಲಿ ಮೊದಲಿನಿಂದಲೂ ಹೂವಿಗೆ ವಿಶೇಷ ಸ್ಥಾನವಿದೆ. ಎಂಥದ್ದೇ ಸಮಾರಂಭವಿರಲಿ, ಎಷ್ಟೇ ಗ್ರ್ಯಾಂಡಾಗಿ ಅಲಂಕರಿಸಿಕೊಂಡಿದ್ದರೂ ಹೂವು ಮುಡಿಯದಿದ್ದರೆ ಅವರ ಅಲಂಕಾರ ಪೂರ್ಣಗೊಳ್ಳುವುದೇ ಇಲ್ಲ ಎಂಬಂತೆ, ಹೂವು ಮಹಿಳೆಯರನ್ನು ಆವರಿಸಿಕೊಂಡಿದೆ. ಇದನ್ನೇ ಆಧಾರವಾಗಿಟ್ಟುಕೊಂಡ ವಿನ್ಯಾಸಗಾರರು ಇದೀಗ ಹೂವಿನ ಡಿಜಿಟಲ್ ಪ್ರಿಂಟ್ ಬಟ್ಟೆಗಳನ್ನು ಮಾರುಕಟ್ಟೆಗೆ ಪರಿಚಯಿಸಿದ್ದಾರೆ, ಹಾಗೇ ಯಶಸ್ಸನ್ನೂ ಕಂಡಿದ್ದಾರೆ. ಹಾಗೆಂದು ಹೂವಿನ ಚಿತ್ತಾರವಿರುವ ಉಡುಪುಗಳ ಫ್ಯಾಷನ್ ಇಂದು ನಿನ್ನೆಯದಲ್ಲ. ಸುಮಾರು ದಶಕಗಳ ಹಿಂದಿನಿಂದಲೂ ಹಿಂದಿ ಸಿನಿ ತಾರೆಯರು ಈ ತರಹದ